ಕರ್ನಾಟಕ ಸರ್ಕಾರ
(ಸಾರಿಗೆ ಇಲಾಖೆ)

ಸಂ:ಸಾಆ:ನೋಂದಣಿ-2/ಪಿಆರ್-111/14-15

ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ರವರ ಕಛೇರಿ,
'ಎ' ಬ್ಲಾಕ್, 1ನೇ ಮಹಡಿ, ಟಿ.ಟಿ.ಎಂ.ಸಿ. ಕಟ್ಟಡ,
ಬಿ.ಎಂ.ಟಿ.ಸಿ. ಸಂಕೀರ್ಣ, ಶಾಂತಿನಗರ,
ಬೆಂಗಳೂರು, ದಿನಾಂಕ: 11-11-2021

E-2
11/11/21

**ಆದೇಶ**

ವಿಷಯ : ಕರ್ನಾಟಕ ಮೋಟಾರು ವಾಹನ ನಿಯಮಾವಳಿ-1989ಕ್ಕೆ ತಿದ್ದುಪಡಿ ಮಾಡಿ ನಿಯಮ-46(A)ಗೆ ಹೊಸದಾಗಿ ಉಪ ನಿಯಮ-46(AA)ಅನ್ನು ಸೇರ್ಪಡೆ ಮಾಡಿ, ಸರ್ಕಾರವು ಹೊರಡಿಸಿರುವ ಅಧಿಸೂಚನೆ ಮೇರೆಗೆ **KA-51/MS** ಮುಂಗಡ ಶ್ರೇಣಿಯನ್ನು ಪ್ರಾರಂಭಿಸಿ ನೋಂದಣಿ ಸಂಖ್ಯೆಗಳನ್ನು ಬಹಿರಂಗ ಹರಾಜು ಪ್ರಕ್ರಿಯೆ ಮೂಲಕ ಹಂಚಿಕೆ ಮಾಡುವ ಬಗ್ಗೆ.

ಉಲ್ಲೇಖ :1)ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಾರಿಇ/60/ಸಾಇಪ/2014, ದಿನಾಂಕ:29.05.2014 ಮತ್ತು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿರುವ ದಿ:07.08.2014.

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂದಿಸಿದಂತೆ ದಿನಾಂಕ.11-11-2021 ರಂದು **KA-51/MS** ಮುಂಗಡ ಶ್ರೇಣಿಯ ನೋಂದಣಿ ಸಂಖ್ಯೆಗಳನ್ನು ಬಹಿರಂಗ ಹರಾಜನ್ನು ನಡೆಸಲು ಪ್ರಕಟಿಸಲಾಗಿತ್ತು. ಆದರೆ ಬಹಿರಂಗ ಹರಾಜಿಗೆ ಸಾರ್ವಜನಿಕರು ನಿಗದಿತ ಪ್ರಮಾಣದಲ್ಲಿ ಹಾಜರಾಗದಿರುವುದರಿಂದ ಮತ್ತು ರಾಜಸ್ವ ಸಂಗ್ರಹದ ಹಿತದೃಷ್ಟಿಯಿಂದ ದಿನಾಂಕ 11-11-2021 ರಂದು ಪ್ರಕಟಿಸಲಾದ ಷರತ್ತನ್ನು ಮುಂದುವರೆಸುತ್ತಾ ದಿನಾಂಕ **18-11-2021** ರ ಮಧ್ಯಾಹ್ನ **12:00** ಗಂಟೆಗೆ ಸಾರಿಗೆ ಆಯುಕ್ತರ ಕಛೇರಿಯಲ್ಲಿ 1ನೇ ಮಹಡಿ, ಟಿಟಿಎಂಸಿ ಕಟ್ಟಡ, ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು ಇಲ್ಲಿ ನಡೆಸಲಾಗುತ್ತದೆ.

ಸಾರ್ವಜನಿಕರು ಮೇಲೆ ನಿಗಧಿಪಡಿಸಿದ ದಿನಾಂಕದಂದು ನಿದಿರ್ಷ್ಟಪಡಿಸಿದ ಸಮಯಕ್ಕೆ ಮೊದಲು ಹಾಜರಾಗಿ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ತಿಳಿಸದೆ.

ಅಪರ ಸಾರಿಗೆ ಆಯುಕ್ತರು,
(ಪ್ರವರ್ತನ)(ದಕ್ಷಿಣ), ಬೆಂಗಳೂರು

**ಇವರಿಗೆ**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಕಳುಹಿಸುತ್ತಾ, ಸದರಿ ಅಧಿಸೂಚನೆಯನ್ನು ಮುಂದಿನ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ, ಅದರ 200 ಪ್ರತಿಗಳನ್ನು ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತರು, ಬೆಂಗಳೂರು ಇವರಿಗೆ ಕಳುಹಿಸಿಕೊಡುವಂತೆ ಕೋರಲಾಗಿದೆ.

**ಪ್ರತಿಗಳು :**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
2. ಅಪರ ಸಾರಿಗೆ ಆಯುಕ್ತರು, ಪರಿಸರ ಮತ್ತು ಇ ಆಡಳಿತ ಇವರಿಗೆ ಇಲಾಖೆಯ ಅಧಿಕೃತ ವೈಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
3. ರಾಜ್ಯದ ಎಲ್ಲಾ ಪ್ರಾದೇಶಿಕ/ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4. ಎಲ್ಲಾ ಅಪರ ಮತ್ತು ಜಂಟಿ ಸಾರಿಗೆ ಆಯುಕ್ತರುಗಳಿಗೆ ಮಾಹಿತಿಗಾಗಿ.
5. ಕಛೇರಿ ಪ್ರತಿ.

752
11/11/21

Scanned with CamScanner